ಕನ್ನಡಪ್ರಭ

# ಬೆಂಗಳೂರಿನ ವ್ಯಂಗ್ಯ ಚಿತ್ರಗಾರರಿಗೆ ಪ್ರಶಸ್ತಿ

## ಜಯರಾಮ್ ಉಡುಪರ ಅಮಿತಾಭ್ ಬಚ್ಚನ್, ಲೀನಾ ಸ್ವಾಮಿಯ ಇರ್ಫಾನ್ ಖಾನ್ ಕ್ಯಾರಿಕೇಚರ್

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಂಬೈನಲ್ಲಿಇತ್ತೀಚೆಗೆ'ಕಾರ್ಟೂನಿಸ್ಟ್ ಕಂಬೈನ್ ಡಬ್ಲ್ಯುಎ ಹಾಗೂ ಕಲಾ ಘೋಡ ಅಸೋಸಿಜಯೇಟ್ಸ್' ಸಹಯೋಗದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಬಾಲಿವುಡ್ ತಾರೆಯರ ಕ್ಯಾರಿಕೇಚರ್ ಸ್ಪರ್ಧೆಯ ಫಲಿತಾಂಶ ಹೊರಬಿದ್ದಿದೆ. ಇದರಲ್ಲಿ ಬೆಂಗಳೂರಿನ ಜಯರಾಮ್ ಉಡುಪ ಅವರು ರಚಿಸಿದ್ದ ಅಮಿತಾಭ್ ಹಾಗೂ ಲೀನಾ ಸ್ವಾಮಿ ಅವರ ಇರ್ಫಾನ್ ಖಾನ್ ಅವರ ಕ್ಯಾರಿಕೇಚರ್‌ಗಳಿಗೆ ಕ್ರಮವಾಗಿ ಎರಡು ಮತ್ತು ಮೂರನೇ ಬಹುಮಾನಗಳು ಬಂದಿವೆ.

ಕಳೆದ 1992ರಲ್ಲಿ 'ಕನ್ನಡಪ್ರಭ'ಕ್ಕೆ ಕ್ಯಾರಿಕೇಚರ್‌ಗಳನ್ನು ರಚಿಸುವುದರ ಮೂಲಕ ಆರಂಭವಾದ ಜಯರಾಮ್ ಅವರ ಕ್ಯಾರಿಕೇಚರ್ ಸೃಷ್ಟಿ ಇಲ್ಲಿಯ ವರೆಗೂ ಬಂದಿದೆ. ಇಂಡಿಯನ್ ಎಕ್ಸ್‌ಪ್ರೆಸ್‌ಗಾಗಿ ಕರ್ನಾಟಕದ



ಲೀನಾ ಸ್ವಾಮಿ



ಜಯರಾಮ್ ಉಡುಪ





ಮುಖ್ಯಮಂತ್ರಿಗಳೆಲ್ಲರ ಕ್ಯಾರಿಕೇಚರ್‌ಗಳನ್ನು ರಚಿಸಿದ್ದು ಇತಿಹಾಸ. ಅವು ಈಗಲೂ ಬೆಂಗಳೂರಿನ ಎಕ್ಸ್‌ಪ್ರೆಸ್‌ನ ಕಾರ್ಯಾಲಯದಲ್ಲಿ ಪ್ರದರ್ಶನಕ್ಕಿವೆ. 1992ರಲ್ಲಿ ನಡೆದ ಹಿಂದೂಸ್ತಾನ್ ಟೈಮ್ಸ್ ಕಾರ್ಟೂನ್ ಸ್ಪರ್ಧೆಯಲ್ಲಿ ಮೂರನೇ ಪ್ರಶಸ್ತಿ ಲಭಿಸಿದೆ. ರಾಷ್ಟ್ರಪತಿ ಭವನ ಹಾಗೂ ಭಾರತೀಯ ವ್ಯಂಗ್ಯಚಿತ್ರಗಾರರ ಗ್ಯಾಲರಿಗಳಲ್ಲಿ ಜಯರಾಮ್ ಅವರ ವ್ಯಂಗ್ಯಚಿತ್ರಗಳು ಪ್ರದರ್ಶನ ಕಂಡಿವೆ.

ಲೀನಾಸ್ವಾಮಿ ಅವರು 2013ರಿಂದ ಕ್ಯಾರಿಕೇಚರ್ಸ್ ಹಾಗೂ ಮತ್ತಿತರ ಕಲಾಪ್ರಾಕಾರಗಳ ರಚನೆಯಲ್ಲಿ ತೊಡಗಿದ್ದಾರೆ. ತಮ್ಮದೇ ವೆಬ್‌ಸೈಟ್‌ನಲ್ಲಿ ಈ ಎಲ್ಲ ಕೃತಿಗಳನ್ನು ಪ್ರದರ್ಶನಕ್ಕಿಟ್ಟಿದ್ದಾರೆ. ಯಾವುದೇ ಕಲಾಶಾಲೆಯಲ್ಲೂ ಅಕಾಡೆಮಿಕ್ ಆಗಿ ಕಲಿಯದೇ ತನ್ನ ಬಿಡುವಿನ ವೇಳೆಯಲ್ಲಿ ಈ ಎಲ್ಲ ಕೃತಿಗಳನ್ನು ರಚಿಸುತ್ತಿದ್ದಾರೆ.